**( ದಿನಾಂಕ.01-09-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲು** ಶ್ರೀ. P.N.S ವಕೀಲರಿಂದ

ಪಾಂಡುರಂಗ ದಿಃ17-01-2016 ರಂದು ತೀರಿಕೊಂಡಿದ್ದಾರೆ ಎಂದರೆ ಸರಿ. ಮೆಹಬೂಬನಿಗೆ ಖರೀದಿ ಪತ್ರ ಮಾಡಿಕೊಟ್ಟಿದ್ದು 25-10-2013 ಎಂದರೆ ಇರಬಹುದು ಎಂದು ಸಾಕ್ಷಿ ಉತ್ತರಿಸುತ್ತಾರೆ. ಮಹಾದೇವನಿಗೆ ಒತ್ತೆ ಹಾಕಿದ್ದು 28-06-2010 ಎಂದರೆ ಇರಬಹುದು. ಮೈಹಬೂಬ ಸಾಬನಿಗೆ ಖರೀದಿ ಪತ್ರ ಮಹಾದೇವನಿಗೆ ಒತ್ತೆ ಪತ್ರ ಮಾಡಿಕೊಟ್ಟಿದ್ದು ನನ್ನ ತಂದೆಗೆ ಯಾವುದೇ ರೀತಿಯ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ಹಣಮಂತರಾವ ದಿಃ24-12-2011 ರಂದು ತೀರಿಕೊಂಡಿದ್ದಾರೆ. ನನ್ನ ತಂದೆ ಜೀವಂತ ಇರುವವರೆಗೆ ಖರೀದಿ ಪತ್ರ ಮತ್ತು ಒತ್ತೆ ಪತ್ರದ ಬಗ್ಗೆ ತಕರಾರು ಮಾಡಿರಲಿಲ್ಲ ಎಂದರೆ ಗೊತ್ತಿಲ್ಲ. ಮಹಾದೇವನಿಗೆ ಮಾಡಿಕೊಟ್ಟ ಒತ್ತೆ ಪತ್ರದ ಪ್ರಕಾರ ಸ್ವಾಧಿನ ಕೊಟ್ಟಿಲ್ಲ ಎಂದರೆ ಸರಿ. ಮೆಹಬೂಬನಿಗೆ ಖರೀದಿ ಪತ್ರದ ಪ್ರಕಾರ ಆತನ ಹೆಸರು ಮೂಟೇಶನ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ್ವಾಧೀನ ಕೊಟ್ಟಿಲ್ಲ ಅಂತ ಉತ್ತರಿಸುತ್ತಾರೆ.

ಮೆಹಬೂಬ ಖರೀದಿ ಮಾಡಿದ ಆಸ್ತಿಯ ಬಗೆ ಕೆಳ ನ್ಯಾಯಾಲಯದಲ್ಲಿ 47/2015 ದಾವೆಯನ್ನು ಸುಮನ, ಕಲಾವತಿ, ಕೌಶಲ್ಯ, ಯಮುನಾ ಅಲಿಯಾಸ ಸೀಮಾ, ಛಾಯಾ, ಕಿಶೋರಿ, ಶೈಲಜಾ, ಲತಿಕಾ, ಚಂದನ, ರೂಪಾಲಿ ಇವರ ವಿರುದ್ದ ಕೇಸು ಮಾಡಿದ್ದ ಎಂದರೆ ಸರಿ. ಆ ಕೇಸಿನಲ್ಲಿ ಈ ಮೇಲೆ ಹೇಳಿದ ಎಲ್ಲರ ವಿರುದ್ಧ ಜಮೀನಿಗೆ ಹೋಗಬಾರದು ಅಂತ ಪ್ರತಿಭಂಧಕಾಜ್ಞೆ ಕೊಟ್ಟಿದ್ದಾರೆ ಎಂದರೆ ಸರಿ. ಕೆಳ ನ್ಯಾಯಾಲಯದಲ್ಲಿ ಮೆಹಬೂಬನಿಗೆ ಪೋಲಿಸ ರಕ್ಷಣೆ ಕೊಟ್ಟಿದ್ದರು ಎಂದರೆ ಸರಿ. ಅಲ್ಲದೆ ನಾವು ಜಮೀನಿಗೆ ಹೋಗಿ ಹರಕತ ಮಾಡಿದ್ದರಿಂದ ಕಿರುಕುಳ ಅರ್ಜಿ ಕೊಟ್ಟಿದ್ದ ಎಂದರೆ ಸರಿ.



ಸಾಕ್ಷಿಗೆ ಒತ್ತೆ ಪತ್ರದ ದೃಢಿಕೃತ ನಕಲಿನಲ್ಲಿ ಇರುವ ಪೋಟೊ ತೋರಿಸಲಾಗಿ ಅದನ್ನು ಗುರುತಿಸಿದ್ದಾರೆ. ಅದರ ಮೇಲಿರುವ ಪೋಟೊ ನನ್ನ ಅಣ್ಣ ಪಾಂಡುರಂಗನದ್ದು ಎಂದರೆ ಸರಿ. ಒತ್ತೆ ಪತ್ರವನ್ನು ನಿಡಿ-4 ಎಂದು, ಅದರ ಮೇಲಿರುವ ಪೋಟೋವನ್ನು ಸಾಕ್ಷಿ ಗುರುತಿಸಿದ್ದರಿಂದ ಅದನ್ನು ನಿಡಿ-4(ಎ) ಎಂದು ಗುರುತಿಸಲಾಯಿತು. ಒತ್ತೆ ಪತ್ರ ಬಿಡುಗಡೆ ಮಾಡಿದ ಪತ್ರ ನಿಪಿ-5 ಅದರ ಮೇಲಿರುವ ಪೋಟೊ ಸಾಕ್ಷಿ ಗುರುತಿಸಿದ್ದು ಅದನ್ನು ನಿಡಿ-5(ಎ) ಎಂದು ಗುರುತಿಸಲಾಯಿತು. ಒತ್ತೆ ಪತ್ರ ನಿಡಿ-6 ಎಂದು, ಅದರ ಮೇಲಿರುವ

ಎರಡು ಪೋಟೊಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ನಿಡಿ-6 (ಎ) ಮತ್ತು ನಿಡಿ- 6(ಬಿ) ಎಂದು ಗುರುತಿಸಲಾಯಿತು. ಮಹಾದೇವನಿಗೆ ಒತ್ತೆ ಪತ್ರ ಬರೆದುಕೊಟ್ಟು 8 ಎಕರೆ 37 ಗುಂಟೆ ಜಮೀನದ ಪೈಕಿ 4 ಎಕರೆ ಜಮೀನಿಗೆ 6 ಲಕ್ಷ 85 ಸಾವಿರ ಹಣವನ್ನು ನನ್ನ ಅಣ್ಣ ಪಡೆದಿದ್ದಾನೆ ಎಂದರೆ ಸರಿ. ಸಾಕ್ಷಿಯು ಪಾಂಡುರಂಗನ ಸಹಿಯನ್ನು ಗುರುತಿಸಿದ್ದು ಅದನ್ನು ನಿಡಿ-6(ಸಿ) ಎಂದು ಗುರುತಿಸಲಾಯಿತು. ನನ್ನ ಅಣ್ಣ ಮನೆತನದ ಅಡಚಣೆ ಸಂಬಂಧ ಹಣ ತೆಗೆದುಕೊಂಡಿದ್ದಾನೆ ಎಂದರೆ ಗೊತ್ತಿಲ್ಲ. ಈ ಜಮೀನಿನ ಹಣ ಪಡೆದುಕೊಂಡಿದ್ದನು ನನ್ನ ಅಣ್ಣ ಹಿಂದಿರುಗಿ ಕೊಂಡಿಲ್ಲ ಮತ್ತು ಜಮೀನು ಒತ್ತೆ ಬಿಡಿಸಿಕೊಂಡಿಲ್ಲ ಎಂದರೆ ಸರಿ. ಮಹಾದೇವ ನಮ್ಮ ಮೇಲೆ ಹಣ ಕೊಡಬೇಕು ಮತ್ತು ಒತ್ತೆ ಪತ್ರ ರದ್ದುಪಡಿಸಬೇಕು ಅಂತ ನಮ್ಮ ಮೇಲೆ ಕೇಸು ದಾಖಲಿಸಿದ್ದಾನೆ ಎಂದರೆ ಸರಿ.

ನಾವು ಶ್ರೀದೇವಿ ವಾಡಿ ಪ್ರತಿವಾದಿ 6 ರ ಮೇಲೆ ದಾವೆ ಮಾಡಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರ ಹೆಸರು ಪಹಣಿಯಲ್ಲಿ ಇದ್ದ ಕಾರಣ ಮಾಡಿದ್ದೇವೆ ಅಂತ ಉತ್ತರಿಸುತ್ತಾರೆ. ಈ ದಾವೆ ಆದ ನಂತರ ಶ್ರೀದೇವಿಗೆ ಹಣ ಕೊಟ್ಟು ಒತ್ತೆ ಪತ್ರ ಬಿಡಿಸಿಕೊಂಡಿದ್ದೇವೆ, ಯಾರು ಹಣ ಕೊಟ್ಟಿದ್ದಾರೆ ಅಂತ ನನಗೆ ಗೊತ್ತಿಲ್ಲ.



ಸಾಕ್ಷಿಗೆ ಮತ್ತೊಂದು ದಾಖಲಾತಿ ತೋರಿಸಲಾಗಿ ಅದರಲ್ಲಿರುವ ಪೋಟಾ ಲತಿಕಾ ಅಂತ ಗುರುತಿಸಿದ್ದಾರೆ. ಈಗಾಗಲೇ ನಿಡಿ-1 ಅಂತ ಗುರುತಿಸಲಾಗಿದೆ. ಲತಿಕಾ ಪೋಟೊವನ್ನು ನಿಡಿ-1(ಎ) ಅಂತ ಗುರುತಿಸಲಾಯಿತು. ಈ ದಾವೆ ದಾಖಲು ಮಾಡಿದ್ದು 12-05-2016 ರಂದು ಎಂದರೆ ಸರಿ. ನಿಡಿ-1 ದಿಃ08-07-2016 ರಂದು ಶ್ರೀದೇವಿ ಬರೆದುಕೊಟ್ಟಿದ್ದಾಳೆ ಎಂದರೆ ಗೊತ್ತಿಲ್ಲ. ಶ್ರೀದೇವಿ ಊರು ಜನರನ್ನು ಸೇರಿಸಿ ಹಣ ಕೊಟ್ಟಿದ್ದರು ಸಹ ಸುಳ್ಳು ದಾವೆ ಮಾಡಿದ್ದರು ಎಂದು ಬಂದಿದ್ದರು ಎಂದರೆ ಸರಿಯಲ್ಲ.

ನನ್ನ ಅಣ್ಣ 11 ಲಕ್ಷ ರೂ. ಪಡೆದುಕೊಂಡು 5 ಎಕರೆ ಜಮೀನನ್ನು ಸ್ವತ್ತಿನ ಸ್ವಾಧೀನ ಕೊಡದೆ ಸಾದಾ ಒತ್ತೆ ಪತ್ರ ಬರೆದುಕೊಟ್ಟಿದ್ದಾನೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯನ್ನು ಓದಿ ಉತ್ತರಿಸಿದ್ದಾರೆ. ಅದನ್ನು ಈಗಾಗಲೇ ನಿಡಿ-4 ಅಂತ ಗುರುತಿಸಲಾಗಿದ್ದು ಅದರ ಮೇಲಿರುವ ಸಾಕ್ಷಿ ಅಣ್ಣನ ಸಹಿಯನ್ನು ನಿಡಿ-4(ಬಿ) ಅಂತ ಗುರುತಿಸಲಾಯಿತು. ಈ ಕಾಗದ ಪತ್ರದಲ್ಲಿ ಪಾಂಡುರಂಗ ತಾನು ಮಾಲೀಕನಿದ್ದೇನೆ ಅಂತ ಬರೆದುಕೊಟ್ಟಿದ್ದಾನೆ ಎಂದರೆ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಪಾಂಡುರಂಗ ನನ್ನ ಪ್ರಕಾರ ಒಟ್ಟು ಕುಟುಂಬದ

ಮ್ಯಾನೇಜರ ಅಲ್ಲ. ಹಣಮಂತರಾವ ತೀರಿಕೊಂಡ ನಂತರ  ಕುಟುಂಬದ ವ್ಯವಸ್ಥೆಯನ್ನು ಪಾಂಡುರಂಗ ಮಾಡುತ್ತಿದ್ದ.

ದಾವಾ ಸ್ವತ್ತುಗಳ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ.ಹಣಮಂತರಾವರ ತಂದೆಯ ಹೆಸರು ಪಾಂಡುರಂಗ. ನನ್ನ ಅಜ್ಜ ಪಾಂಡುರಂಗನಿಗೆ ಹಣಮಂತರಾವ ಮತ್ತು ವಿಠಾಬಾಯಿ ಹೆಣ್ಣು ಮಗಳು ಇದ್ದರು. ಅವಳು ತೀರಿಕೊಂಡಿದ್ದಾಳೆ. ವಿಠಾಬಾಯಿಗೆ ಮಕ್ಕಳು ಇಲ್ಲ. ನನ್ನ ವಾದಪತ್ರದಲ್ಲಿ ಹಣಮಂತರಾವರಿಗೆ ಕುಟುಂಬ ವಿಭಾಗದಲ್ಲಿ ಬಂದಿದೆ ಅಂತ ಬರೆದಿದೆ ಎಂದರೆ ಸರಿ.



ಹಣಮಂತರಾವರಿಗೆ ಹಂಚಿಕೆಯಲ್ಲಿ ಬಂದ ಆಸ್ತಿಗಳು ಅವರಿಗೆ ಬಂದ ಸ್ವಂತ ಆಸ್ತಿಗಳು ಎಂದು ವಾದಪತ್ರದ ಪ್ಯಾರಾ ನಂಬರ 4 ರಲ್ಲಿ ಬರೆದಿದೆ ಎಂದರೆ ಸರಿ.

ದಿಃ25-10-2013 ರಂದು ನನ್ನ ಅಣ್ಣ 11 ಲಕ್ಷ ರೂ.ಗಳನ್ನು ಕೊಟ್ಟು ಒತ್ತೆ ಹಾಕಿದ ಜಮೀನನ್ನು ಬಿಡಿಸಿಕೊಂಡಿದ್ದಾನೆ ಎಂದರೆ ಸರಿ.  ಅದೇ ದಿನ ಮೆಹಬೂಬ 6 ಲಕ್ಷ 39 ಸಾವಿರಗಳನ್ನು ಕೊಟ್ಟು ಕ್ರಯ ಮಾಡಿಸಿಕೊಂಡಿದ್ದಾನೆ ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಖರೀದಿ ಪತ್ರ ತೋರಿಸಲಾಗಿ ಅದನ್ನು ಗುರುತಿಸಿದ್ದಾರೆ. ಖರೀದಿ ಪತ್ರ ನಾನೇ ಹಾಜರುಪಡಿಸಿದ್ದೇನೆ ಎಂದರೆ ಸರಿ. ಅದರಲ್ಲಿ ಪಾಂಡುರಂಗ ಅಣ್ಣನ ಸಹಿ ಗುರುತಿಸಿದ್ದಾರೆ. ಸದರಿ ಖರೀದಿ ಪತ್ರದಲ್ಲಿರುವ ಸಹಿ ಗುರುತಿಸಿದ್ದರಿಂದ ಅದನ್ನು ನಿಡಿ-7 ಎಂದು  ಮತ್ತು ಸಾಕ್ಷಿ ಸಹಿ ನಿಡಿ-7(ಎ) ಎಂದು ಗುರುತಿಸಲಾಯಿತು. ಈ ಖರೀದಿ ಪತ್ರದಲ್ಲಿ ನನ್ನ ಅಣ್ಣ 17 ಲಕ್ಷ 39 ಸಾವಿರ ತೆಗೆದುಕೊಂಡು ಖರೀದಿ ಬರೆದುಕೊಟ್ಟಿದ್ದಾನೆ ಎಂದು ಖರೀದಿ ಪತ್ರದಲ್ಲಿ ನಮೂದಿಸಿದ್ದಾನೆ ಎಂದರೆ ಸರಿ. ನನ್ನ ಅಣ್ಣ ಕುಟುಂಬದ ಅಡಚಣೆಗಾಗಿ ಮಹಾದೇವ, ಶ್ರೀದೇವಿ ಮತು ಮೆಹಬೂಬನಿಗೆ ಜಮೀನುಗಳನ್ನು ಒತ್ತೆ ಹಾಕಿ ಹಣ ಪಡೆದುಕೊಂಡಿದ್ದಾನೆ ಎಂದರೆ ಗೊತ್ತಿಲ್ಲ. ಹಣಮಂತ ತೀರಿಕೊಂಡ ನಂತರ ನನ್ನ ಅಣ್ಣ ಸಾಲ ಮಾಡಿದ್ದ ಎಂದರೆ ಸರಿಯಲ್ಲ. ನನ್ನ ತಂದೆ ಸಾಲ ಮಾಡಿದ್ದು ಮತ್ತು ನನ್ನ ಅಣ್ಣ ಪಾಂಡುರಂಗ ತಾನು ಸಾಲ ಮಾಡಿದ್ದು ಹಣದ ಅವಶ್ಯಕತೆ ಇದ್ದ ಕಾರಣ  ಮೆಹಬೂಬನಿಗೆ ಮಾರಾಟ ಮಾಡಿದ್ದ ಎಂದರೆ ಸರಿಯಲ್ಲ.

ನಾನು ಪಾಂಡುರಂಗನ ವಾರಸುದಾರರ ಅಲ್ಲ  ಹಣಮಂತರಾವರ ವಾರಸುದಾರರು ಮತ್ತು

ಪಾಂಡುರಂಗ ನನ್ನ ಅಣ್ಣ.



ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದಾರೆ. ಆದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಆಳಂದ